# ಕೆರೆ ಮಣ್ಣು ಹಾಕುವುದರಿಂದ ಎಷ್ಟು ಪ್ರಯೋಜನ?

ಪಿ. ಜಿ. ತಿಪ್ಪನಗೌಡರ

ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ – ೫೮೧ ೧೩೫

☎: ೯೮೬೬೮ ೦೩೪೩೨ ಮಿಂಚಂಚೆ: kvk_haveri@rediffmail.com

**ಮಣ್ಣು ಫಲವತ್ತತೆ ಇರುವವರೆಗೂ ಕಾಮಧೇನು-ಕಲ್ಪವೃಕ್ಷವಿದ್ದಂತೆ. ಕಾರಣಾಂತರಗಳಿಂದ ಫಲವತ್ತತೆ ಕಡಿಮೆಯಾದಾಗ ಏನು ಮಾಡಬೇಕು. ಮರುಪೂರಣ ಮಾಡುವುದು ಸರಿಯಾದ ಕ್ರಮ. ಕೆರೆಯ ಮಣ್ಣನ್ನು ಸೇರಿಸುವುದು ಒಂದು ಕ್ರಮವೇನೋ ನಿಜ. ಆದರೆ, ಕೆಲ ದಿನಗಳ ನಂತರ .....? ಲೇಖಕರು ಚಿಂತನೆಗೆ ಹಚ್ಚುವ ಪ್ರಶ್ನೆಯನ್ನು ಮುಂದಿರಿಸಿದ್ದಾರೆ. ಅನುಭವಿಗಳೂ ತಮ್ಮ ಅನಿಸಿಕೆ ತಿಳಿಸಬಹುದು.**


ಕೆರೆ ಮಣ್ಣು ಹಾಕಿದ ಜಮೀನು

ಜಮೀನಿನ ಫಲವತ್ತತೆ ಕಡಿಮೆ ಆಗಿದೆ ಎಂದು "ಬೆಳೆಯ ಇಳುವರಿ" ಮೂಲಕ ರೈತರಿಗೆ ಮನವರಿಕೆ ಆದಾಗ ಅದನ್ನು ಹೆಚ್ಚಿಸಲು ಅವರೇ ಕಂಡುಕೊಂಡ ಮಾರ್ಗ, ಕೆರೆ ಮಣ್ಣನ್ನು ಜಮೀನುಗಳಿಗೆ ನೀಡುವುದು!

ವೈಜ್ಞಾನಿಕವಾಗಿ ಇದೆಷ್ಟು ಸರಿ? ಹೀಗೆ ಕೆರೆಯ ಮಣ್ಣನ್ನು ಹೊಲಗಳಿಗೆ ಹಾಕುವುದರಿಂದ ಫಲವತ್ತತೆ ಹೆಚ್ಚುತ್ತದೆಯೆ?

**ಏನೀ ಫಲವತ್ತತೆ?**

ಮಣ್ಣಿನಲ್ಲಿರುವ ಪೋಷಕಾಂಶಗಳಿಂದ "ಬೆಳೆಗೆ ದೊರೆಯುವ" ಅದರ ಪ್ರಮಾಣವೇ ಫಲವತ್ತತೆ. ಇದರ ಪ್ರಮಾಣವು ಮಣ್ಣಿನಲ್ಲಿನ ಪೋಷಕಾಂಶಗಳ ಮೂಲ ಹಾಗೂ ಗುಣಧರ್ಮಗಳಾದ ರಸಸಾರ, ಲವಣಾಂಶ, ಸಾವಯವ ಅಂಶ, ನೀರು ಮತ್ತು ಗಾಳಿಯಾಡುವಿಕೆ, ಮಣ್ಣಿನ ರಚನೆ, ಇತ್ಯಾದಿಗಳನ್ನು ಅವಲಂಬಿಸುತ್ತದೆ. ಫಸಲಿಗೆ ಪೋಷಕಾಂಶಗಳು ಭೂಮಿ, ಗಾಳಿ ಮತ್ತು ನೀರಿನಿಂದ ದೊರೆಯುತ್ತವೆ. ಭೂಮಿಯಿಂದ ಪಡೆದ ಪೋಷಕಾಂಶಗಳನ್ನು ವಾಪಸ್ಸು ನೀಡದೇ ಇದ್ದಲ್ಲಿ ಜಮೀನಿನ ಫಲವತ್ತತೆ ಕಡಿಮೆಯಾಗುತ್ತಾ ಸಾಗುವುದೆಬುಂದು ನಮಗೆಲ್ಲರಿಗೂ ತಿಳಿದೇ ಇದೆ. ಇದನ್ನು ಹೆಚ್ಚಿಸಲು ಕೆರೆ ಮಣ್ಣನ್ನೇ ಹಾಕಬೇಕೆ? ಬೇರೆ ವಿಧಾನಗಳಿಲ್ಲವೆ?

**ಕಾರಣಗಳು**

ಫಲವತ್ತತೆ ಮತ್ತು ಉತ್ಪಾದಕತೆಗಳು ಕಡಿಮೆಯಾಗಲು ಹಲವಾರು ಕಾರಣಗಳುಂಟು. ಅತಿಯಾದ ರಸ ಗೊಬ್ಬರಗಳ ಬಳಕೆ, ಅಸಮತೋಲನ ಪೋಷಕಾಂಶಗಳ ಬಳಕೆ, ಮಣ್ಣಿನಲ್ಲಿನ ಸೂಕ್ಷ್ಮಜೀವಿಗಳ ನಾಶ, ಸೂಕ್ಷ್ಮಜೀವಿಗಳ ಆಹಾರವಾದ ಸಾವಯವ ಪದಾರ್ಥಗಳನ್ನು ಮಣ್ಣಿಗೆ ನೀಡದೆ ಇರುವುದು, ನೀರಿನ ಅತಿಯಾದ ಬಳಕೆ ಇತ್ಯಾದಿ.

**ಕೆರೆಮಣ್ಣಿನಲ್ಲಿ ವಿಶೇಷವೇನಿದೆ?**

ಮಳೆಗಾಲದಲ್ಲಿ ಅನೇಕ ಕಡೆಗಳಿಂದ ನೀರು ಹರಿದುಬಂದು ಕೆರೆಗಳಲ್ಲಿ ಶೇಖರಣೆ ಆಗುವುದನ್ನು ನಾವು ನೋಡಿದ್ದೇವೆ. ನೀರಿನ ಜೊತೆಗೆ ನೀರು ಹರಿದು ಬರುವು ಸ್ಥಳದಿಂದ ಸಣ್ಣ ಸಣ್ಣ ಮಣ್ಣಿನ ಕಣಗಳೂ ತೇಲುತ್ತಾ, ಉರುಳುತ್ತಾ, ತೆವಳುತ್ತಾ ಬಂದು ಕೆರೆಯನ್ನು ಸೇರುತ್ತವೆ. ಇದರಲ್ಲಿ ಪೋಷಕಾಂಶಗಳ ಪ್ರಮಾಣವು, ಕೆಲವೊಂದು ಸಂದರ್ಭಗಳಲ್ಲಿ ಉಪ್ಪಿನ ಪ್ರಮಾಣವೂ

ಅಧಿಕವಾಗಿರುತ್ತದೆ. ನಮ್ಮ ಜಮೀನುಗಳ ಫಲವತ್ತತೆ ಕಡಿಮೆಯಾದಾಗ ಇಂತಹ ಕೆರೆ ಮಣ್ಣನ್ನು ಅಲ್ಲಿಗೆ ಏರಿಸಿ- ಮಿಶ್ರ ಮಾಡಿದಾಗ ಮೊದಮೊದಲು ಬೆಳೆಯ ಇಳುವರಿ ಹೆಚ್ಚುವುದು ಎಲ್ಲರಿಗೂ ಕಂಡು ಬಂದಿರುವ ಸತ್ಯ. ಆದರೆ ಕಾಲ ಕ್ರಮೇಣ ಅಂತಹ ಜಮೀನಿಗೆ ಏನಾಗುವುದು ಎಂದು ಪರಿಶೀಲಿಸಿದರೆ ಸತ್ಯದ ಇನ್ನೊಂದು ಮುಖ ಗೋಚರವಾಗುತ್ತದೆ.

**ಸತ್ಯದ ಇನ್ನೊಂದು ಮುಖ**

ಒಂದು ಕಡೆ ಬೆಳೆಯ ಉತ್ಪನ್ನ ಮೊದಲು ಕೆಲವು ವರ್ಷಗಳು ಹೆಚ್ಚಾದರೆ, ಇನ್ನೊಂದು ಕಡೆ ಕಾಲಕ್ರಮೇಣವಾಗಿ ಭೂಮಿಯು ಬರಡಾಗುತ್ತಾ ಸಾಗುವುದು. ಹೇಗೆಂದು ಆಶ್ಚರ್ಯಪಡುವಿರಾ? ಕೆರೆ ಮಣ್ಣು ಏರಿಸುವ ಪದ್ಧತಿಯು ಅಡಿಕೆ ತೋಟಗಳಲ್ಲಿ ಸರ್ವೇಸಾಮಾನ್ಯವಾಗಿತ್ತು. ಹಾಗೆ ಮಾಡಿ ಎಷ್ಟೊ ಕಡೆಯಲ್ಲಿ ರೈತರು ಹಲವಾರು ಸಮಸ್ಯೆಗಳನ್ನು ಎದುರಿಸಿ ಬೆಳೆಯನ್ನೇ ತೆಗೆದುಹಾಕಿದ್ದಾರೆ. ಏಕೆ ಗೊತ್ತೆ?

ನಮ್ಮ ಭೂಮಿಯು ಚೌಕಟ್ಟು ಹಿಗ್ಗುವುದಿಲ್ಲ. ಹೌದಲ್ಲವೆ? ನಾವು ಏರಿಸಿದ ಕೆರೆ ಮಣ್ಣು ಆ ಚೌಕಟ್ಟಿನೊಳಗೇ ಜಮೀನಿನ ಮಣ್ಣಿನೊಂದಿಗೆ ಮಳೆಯ ಹೊಡೆತಕ್ಕೆ ಕಾಲ ಕ್ರಮೇಣ ಸೇರುತ್ತ ಹೋಗುವುದರಿಂದ ಮಣ್ಣಿನಲ್ಲಿರುವ ರಂಧ್ರಗಳು ಮುಚ್ಚುತ್ತಾ ಹೋಗುತ್ತವೆ. ಕೆಲವು ದಿನ ನೀರನ್ನು ಒದಗಿಸದಿದ್ದಲ್ಲಿ ಅಂತಹ ಭೂಮಿಯು ಭಾರೀ ಗಡುಸಾಗುವುದು. ಇದರಿಂದ ಗಾಳಿಯಾಡುವಿಕೆ ಕಡಿಮೆಯಾಗಿ ಭೌತಿಕ-ರಾಸಾಯನಿಕ-ಜೈವಿಕ ಕ್ರಿಯೆಗಳಿಗೆ ತೊಂದರೆ ಉಂಟಾಗಿ, ಅನೇಕ ಬೆಳೆ ಸಂಬಂಧಿತ ಸಮಸ್ಯೆಗಳು ಉಲ್ಬಣಗೊಳ್ಳುತ್ತವೆ. ಕಾಲಕ್ರಮೇಣ ಬೆಳೆಯ ಇಳುವರಿ ಗಣನೀಯವಾಗಿ ಕಡಿಮೆಯಾಗಿ ನಾವು ನಷ್ಟವನ್ನು ಅನುಭವಿಸಬೇಕಾಗುವುದು. ಇದು ಬೇಕೆ? ನೀವೇ ನಿರ್ಧರಿಸಿ!

**ಸಲಹೆ**

ಮರಳು ಮಿಶ್ರಿತ ಮಣ್ಣಿಗೆ ಸಣ್ಣ ಮಣ್ಣು ಸೇರಿಸುವುದರಲ್ಲಿ ಹಾಗೂ ಸಣ್ಣ ಮಣ್ಣಿಗೆ ಮರಳು ಮಿಶ್ರಿತ ಮಣ್ಣನ್ನು ಸೇರಿಸುವುದರಲ್ಲಿ ಅರ್ಥವಿದೆ. ಆದರೆ ಫಲವತ್ತತೆಯನ್ನು ಹೆಚ್ಚಿಸಲು ಮಾತ್ರ ಕೆರೆ ಮಣ್ಣ ಏರಿಸುವುದು ಸೂಕ್ತವಲ್ಲ. ಬದಲಿಗೆ ಸಾವಯವ ಮೂಲಗಳನ್ನು ಬಳಸುವುದು ಹೆಚ್ಚು ಸೂಕ್ತ.

****


**ಕೃಷಿ ಮುನ್ನಡೆಯನ್ನು ನಿಮ್ಮ ಪ್ರಿಯರಿಗೆ ಉಡುಗೊರೆಯಾಗಿಯೂ ನೀಡಬಹುದು!!**

**ಕೃಷಿ ಮುನ್ನಡೆ**

**ನಾನು ಉಡುಗೊರೆಯಾಗಿ ಆಜೀವ ಸದಸ್ಯತ್ವಕ್ಕಾಗಿ ೧೦೦೦ ರೂ.ಗಳನ್ನು ಹಣ ಕಳುಹಿಸುತ್ತಿದ್ದೇನೆ**

ಹುಟ್ಟು ಹಬ್ಬ/ನಾಮಕರಣ/ಮದುವೆ/ಗೃಹ ಪ್ರವೇಶ/________ ನಿಮಿತ್ತ ನಾನು ಉಡುಗೊರೆಯಾಗಿ "ಕೃಷಿ ಮುನ್ನಡೆ" ಪತ್ರಿಕೆಯನ್ನು ಕೊಡಬಯಸುತ್ತೇನೆ.

ಹಣ ಕಳುಹಿಸುತ್ತಿರುವವರ ಸಹಿ

**ಡಿ.ಡಿ.ಯೊಂದಿಗೆ ಈ ಕೂಪನ್‌ನ್ನು ಕಳುಹಿಸುವ ವಿಳಾಸ**

ಪ್ರಕಟಣಾ ಕೇಂದ್ರ,
ಕೃಷಿ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೫
☎: ೦೮೩೬-೨೭೪೮೭೪೮

**ಪತ್ರಿಕೆಗಾಗಿ 1000/- ರೂ. ಗಳನ್ನು Comptroller, UAS, Dharwad ಇವರ ಹೆಸರಿನಲ್ಲಿ ಡಿ.ಡಿ. ಕಳುಹಿಸಿಕೊಡುತ್ತಿದ್ದೇನೆ. ಈ ಕೆಳಗೆ ನಮೂದಿಸಿದ ವಿಳಾಸಕ್ಕೆ ಕೃಷಿ ಮುನ್ನಡೆ ಪತ್ರಿಕೆಯನ್ನು ನನ್ನ ಉಡುಗೊರೆಯಾಗಿ ಕಳುಹಿಸಿಕೊಡಲು ಕೋರಿಕೆ.**

ನನ್ನ ಹೆಸರು:....................................
....................................
ಊರು:....................................
ಅಂಚೆ:....................................
ಪಿನ್:....................................
ತಾಲೂಕು:....................................
ಜಿಲ್ಲೆ:....................ರಾಜ್ಯ:....................
ದೂರವಾಣಿ:....................................
ಮಿಂಚಂಚೆ....................................

ನಿಮ್ಮ ಬಂಧು-ಮಿತ್ರರಿಗೆ ಉಡುಗೊರೆ ನೀಡಲು ಇಲ್ಲಿದೆ ಕೃಷಿ ಮುನ್ನಡೆ ಚಂದಾ ಕೂಪನ್....................................

**ಕೃಷಿ ಮುನ್ನಡೆಯನ್ನು ಉಡುಗೊರೆಯಾಗಿ ಈ ವಿಳಾಸಕ್ಕೆ ಕಳುಹಿಸಿರಿ**

ಹೆಸರು:....................................
....................................
ಊರು:....................................
ಅಂಚೆ:....................................
ಪಿನ್:....................................
ತಾಲೂಕು:....................................
ಜಿಲ್ಲೆ:....................ರಾಜ್ಯ:....................
ದೂರವಾಣಿ:....................................
ಮಿಂಚಂಚೆ....................................

**ವಿ.ಸೂ:** ಈ ಕೂಪನನ್ನು ನಿಮ್ಮ ಬಂಧು ಮಿತ್ರರಿಗೆ ಉಡುಗೊರೆ ನೀಡಬಹುದು. ನೀಡುವವರ ಹೆಸರನ್ನು ಕೃಷಿ ಮುನ್ನಡೆ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. ಉಡುಗೊರೆ ಪಡೆಯುವವರಿಗೆ ಪತ್ರಿಕೆಯನ್ನು ನಿರಂತರವಾಗಿ ಕಳುಹಿಸಿಕೊಡಲಾಗುವುದು. ಈ ಕೂಪನ್ನಿನ ಝೆರಾಕ್ಸ ಪ್ರತಿಯನ್ನೂ ಬಳಸಬಹುದು.